# ಹಾಡುವ ಹುಡುಗಿಯ ಬಣ್ಣದ ಗೀಳು!

**ಕಿರುತೆರೆಯ ಮೂಲಕ ಮನೆಮನೆಗಳಲ್ಲಿ ಹೊಕ್ಕುಬಳಕೆಯ ಸಲಿಗೆ ಬೆಳೆಸಿಕೊಂಡಿರುವ ಹುಡುಗಿ ಅಂಕಿತಾ ಅಮರ್, ಈಗ ಹಿರಿತೆರೆಯಲ್ಲಿ ತಮ್ಮ ಅದೃಷ್ಟಪರೀಕ್ಷೆಗೆ ಸಜ್ಜಾಗಿದ್ದಾರೆ.**

**■ ಪದ್ಮನಾಭ ಭಟ್**



‘ನನಗೆ ಬಣ್ಣ ಹಚ್ಚಿಕೊಳ್ಳುವುದೆಂದರೆ ಇಷ್ಟ. ರಂಗಭೂಮಿಯಾಗಲಿ, ಕಿರುತೆರೆಯಾಗಲಿ, ಸಿನಿಮಾ ಆಗಲಿ ನನಗೆ ಅಂಥ ವ್ಯತ್ಯಾಸವಿಲ್ಲ. ಕ್ಯಾಮೆರಾ ಎದುರಿನಲ್ಲಿ, ವೇದಿಕೆಯ ಮೇಲೆ ಕೆಲಸ ಮಾಡುವಾಗ ಸಿಗುವ ಆನಂದ ಬೇರೆ ಎಲ್ಲಿಯೂ ಸಿಗುವುದಿಲ್ಲ. ಆ ಖುಷಿಯಾಗಿ ನಾನು ಹಾತೊರೆಯುತ್ತಲೇ ಇರುತ್ತೇನೆ. ಈಗಲೇ ಯಾರಾದರೂ ಬಂದು ‘ಬಾ ನಾಟಕ ಮಾಡೋಣ’ ಎಂದು ಕರೆದರೆ ಎದ್ದು ಓಡೋಡಿ ಹೋಗಿಬಿಡುತ್ತೇನೆ. ಇದೊಂಥರ ಬಣ್ಣದ ಗೀಳು’ ಎಂದು ತಮ್ಮ ಬಟ್ಟಲುಗಂಗಳನ್ನು ಇನ್ನಷ್ಟು ಹಿಗ್ಗಿಸಿ ನಕ್ಕರು ಅಂಕಿತಾ ಅಮರ್. ಎಂಥ ಒತ್ತಡದಲ್ಲಿಯೂ ಮೈದುಂಬಿ ಮನದುಂಬಿ ನಗುವುದು ಅವರ ವೈಶಿಷ್ಟ್ಯ.

‘ನಮ್ಮನೆ ಯುವರಾಣಿ’ ಧಾರಾವಾಹಿಯ ಮೀರಾ ಆಗಿ ಪ್ರಸಿದ್ಧರಾಗಿರುವ ಅಂಕಿತಾ ಹುಟ್ಟಿದ್ದು ಮೈಸೂರಲ್ಲಿ. ನಂತರ ಶಿವಮೊಗ್ಗದಲ್ಲಿ ಮೂರು ವರ್ಷ ಕಳೆದು ಬೆಂಗಳೂರಿಗೆ ಸೇರಿಕೊಂಡರು. ನಂತರದ ಶಿಕ್ಷಣವೆಲ್ಲ ರಾಜಧಾನಿಯಲ್ಲಿಯೇ. ಶೈಕ್ಷಣಿಕ ತರಬೇತಿಗಳು ಶಾಲೆಗಳಲ್ಲಿ ಸಿಕ್ಕಿದ ಹಾಗೆ ಕಲಾಜಗತ್ತಿನ ಸಂಸ್ಕಾರಗಳು ಮನೆಯಲ್ಲಿಯೇ ದೊರೆತವು. ಅಂಕಿತಾ ಅವರ ತಂದೆ ಮತ್ತು ತಾಯಿ ಇಬ್ಬರೂ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ಬೆಂಗಳೂರಿನ ‘ಕಲಾಗಂಗೋತ್ರಿ’ ನಾಟಕ ತಂಡದ ಭಾಗವಾಗಿದ್ದರು. ಸಹಜವಾಗಿಯೇ ಮನೆಯಲ್ಲಿ ಕಲೆಯ ಗಂಧ ಹರಡಿತ್ತು. ಬಾಲ್ಯದಿಂದಲೇ ಹಾಡು ನೃತ್ಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅಂಕಿತಾ ಓದಿನಲ್ಲೇನೂ ಹಿಂದೆ ಬಿದ್ದವರಲ್ಲ. ಎಂ.ಎಸ್‌ಸಿ ಮಾಡಲು ಮೈಸೂರಿಗೆ ಹೋದ ಅವರು ಎರಡು ಚಿನ್ನದ ಪದಕದೊಂದಿಗೆ ಪದವಿ ಮುಗಿಸಿ ವಾಪಸಾದರು. ಪಿಎಚ್‌ಡಿ ಮಾಡುವ ಸಿದ್ಧತೆಯಲ್ಲಿದ್ದಾಗಲೇ ಅವರಿಗೆ ‘ನಮ್ಮನೆ ಯುವರಾಣಿ’ಯಲ್ಲಿ ನಟಿಸುವ ಅವಕಾಶ ಸಿಕ್ಕಿದ್ದು. ಪಿಎಚ್‌ಡಿ ಮತ್ತು ನಟನೆ ಎರಡರಲ್ಲಿ ಒಂದನ್ನು ಮಾತ್ರವೇ ಆಯ್ದುಕೊಳ್ಳಬೇಕಾದ ಸಂದಿಗ್ಧತೆಯಲ್ಲಿದ್ದಾಗ ಅಪ್ಪನೇ ನಟನೆಯ ಕಡೆ ಬೊಟ್ಟು ಮಾಡಿ ತೋರಿಸಿದರು. ‘ನಿನಗೆ ಮೂವತ್ತೈದು ವರ್ಷ ಆದಮೇಲೆ ಮೀರಾ ಆಗಲು ಸಾಧ್ಯವಿಲ್ಲ. ಆದರೆ ಪಿಎಚ್‌ಡಿಯನ್ನೂ ಆಗಲೂ ಮಾಡಬಹುದು’ ಎಂದು ಹೇಳಿದ್ದ ತಂದೆಯ ಮಾತನ್ನು ಈಗಲೂ ಅಂಕಿತಾ ನೆನಪಿಸಿಕೊಳ್ಳುತ್ತಾರೆ. ‘ಆ ಅವಕಾಶ ನನಗೆ ಬರಲು ಒಂದೆರಡೇ ದಿನ ತಡವಾಗಿದ್ದರೂ ನಾನು ಲ್ಯಾಬೊಂದರಲ್ಲಿ ಅಸಿಸ್ಟೆಂಟ್ ಆಗಿ ಕೆಲಸ ಮಾಡಿಕೊಂಡಿರುತ್ತಿದ್ದೆ’ ಎಂದು ನೆನಪಿಸಿಕೊಳ್ಳುತ್ತಾರೆ ಅವರು.

ಮೀರಾ ಪಾತ್ರ ಅವರ ಬದುಕಿನಲ್ಲಿ ತೆರೆದ ದಾರಿ ಇಂದಿಗೆ ಹಲವು ಕವಲುಗಳಲ್ಲಿ ಮುಂದೆ ಸಾಗುತ್ತಿದೆ.

‘ನಾನು ಮೀರಾ ಮಾತ್ರ ಒಪ್ಪಿಕೊಂಡು ನಟಿಸಲು ಶುರುಮಾಡಿದೆ. ನನಗೆ ಹಾಡಲು ಬರುತ್ತದೆ ಎಂಬ ಕಾರಣಕ್ಕಾಗಿ ಅಂಥ ಸನ್ನಿವೇಶಗಳನ್ನೇ ನಿರ್ದೇಶಕರು ಸೃಷ್ಟಿಸಿದರು. ಹಾಗಾಗಿ ನಾನು ಬರೀ ನಟಿಯಾಗಿಯಷ್ಟೇ ಅಲ್ಲ, ಗಾಯಕಿಯಾಗಿಯೂ ಗುರ್ತಿಸಿಕೊಳ್ಳಲು ಸಾಧ್ಯವಾಯಿತು. ಬಹುಶಃ ಈ ಕಾರಣಕ್ಕಾಗಿಯೇ ಏನೋ, ‘ಎದೆ ತುಂಬಿ ಹಾಡುವೆನು’ ರಿಯಾಲಿಟಿ ಷೋ ನಿರೂಪಕಿಯಾಗಿ ಆಯ್ಕೆಯಾದೆ. ಅದೊಂದು ಅದ್ಭುತ ಅನುಭವ. ಬರೀ ಮೂರೇ ತಿಂಗಳಲ್ಲಿ ನನಗೆ ಅದರಿಂದ